

ಮಗು ನಾಲ್ಕು ಗೋಡೆಗಳ ಮಧ್ಯದಲ್ಲಿಟ್ಟ ಗಾಜಿನ ಪೆಟ್ಟಿಗೆಯ ದ್ರಾವಣದಲ್ಲಿ ಅನಾಥ ಶವದಂತೆ ತೇಲಾಡುವ ದೃಶ್ಯವನ್ನು ನೋಡಲಾರದೆ ಹಿರಿಯ ಜೀವಗಳು ನೊಂದು ನಿಟ್ಟುಸಿರಿಡತೊಡಗಿದವು. ಬಸುರಿ ಬಯಕೆಯನ್ನು ತೀರಿಸುವ ಅವಕಾಶವನ್ನೂ ತಮ್ಮ ಹೆಣ್ಣು ಮಕ್ಕಳು ತಮ್ಮಿಂದ ಕಿತ್ತುಕೊಂಡರಲ್ಲ ಎಂದು ಹೆತ್ತವರು ಕಣ್ಣೀರು ಹಾಕತೊಡಗಿದರು. ಎಳೆಯ ಕಂದನ ಮಿಸುಕಾಟ, ಒದೆತಗಳ ರೋಮಾಂಚನವನ್ನು ಅನುಭವಿಸದೇ ತಾಯಂದಿರಾಗುತ್ತಿರುವ ತಮ್ಮ ಮಕ್ಕಳು, ಸೊಸೆಯಂದಿರು ಹೆತ್ತಮ್ಮನಾಗಲು ಹೇಗೆ ಸಾಧ್ಯವೆಂದು ಮರುಕ ಪಡತೊಡಗಿದರು. ಚೊಚ್ಚಲ ಬಸುರಿಗೆ ಸೀಮಂತ ಮಾಡಿ ಸಂಭ್ರಮಪಡಬೇಕೆಂದಿದ್ದ ಅಮ್ಮಂದಿರು ಡಾಕ್ಟರ್ ಅಗರ್ವಾಲ್ ದಂಪತಿಗಳ ಸಂಶೋಧನೆಗೆ ಹಿಡಿ ಶಾಪ ಹಾಕತೊಡಗಿದರು. ತಾಯಿ ಮಗುವಿನ ಮಧ್ಯ ಬೆಸೆದುಕೊಂಡಿರುವ ಹೊಕ್ಕಳ ಬಳ್ಳಿ ಆಕೆ ಸೇವಿಸುವ ಆಹಾರವನ್ನು ಮಗುವಿಗೆ ತಲುಪಿಸುತ್ತದೆ. ಆದರೆ ಅಕ್ವೇರಿಯಂನಲ್ಲಿನ ಮೀನಿಗೆ ಆಹಾರ ನೀಡುವಂತೆ ಗಾಜಿನ ಪೆಟ್ಟಿಗೆಯಲ್ಲಿನ ಮಗುವಿಗೆ ನಾಲ್ಕು ಹನಿಗಳ ದ್ರಾವಣವನ್ನು ಉಣಿಸುವುದೆಂದರೆ? ಇಂಥ ಮಗು ನಾಳೆ ಎಡವಿ ಬಿದ್ದಾಗ ನೋವಿನಿಂದ ಅಮ್ಮಾ ಎನ್ನುವುದಾಗಲಿ, ನೆಲಕ್ಕೆ ಬಿದ್ದ ಮಗುವಿನ ನೋವು ತಾಯ ಕರುಳನ್ನು ಹಿಂಡುವುದಾಗಲಿ ಅನುಮಾನ ಎಂದುಕೊಳ್ಳುತ್ತ ಹಿರಿಯ ಜೀವಗಳು ಅನ್ನಲಾರದೆ ಆಡಲಾರದೆ ಮೌನವಾಗಿ ರೋದಿಸಲಾರಂಭಿಸಿದವು.

ದೇಶದ ಮೊಟ್ಟ ಮೊದಲ ಬಾಕ್ಸ್ ಬೇಬಿ ಅತ್ಯಂತ ಯಶಸ್ವಿಯಾಗಿ ಬೆಳೆದು ಬಾಕ್ಸ್‌ನಿಂದ ಮುಕ್ತಿ ಪಡೆದಿತ್ತು. ಡಾಕ್ಟರ್ ಅಗರ್ವಾಲ್ ದಂಪತಿಗಳು ತಮ್ಮ ಕೈಯ್ಯಾರೆ ಮಗುವನ್ನು ಅದರ ತಂದೆ ತಾಯಿಗೆ ಹಸ್ತಾಂತರಿಸಿ ಅಭಿನಂದಿಸಿದ್ದರು. ಪತ್ರಿಕೆಯವರು ಕವರ್ ಪೇಜ್ ಸ್ಟೋರಿಯಾಗಿ ಇದನ್ನು ಪ್ರಕಟಿಸಿದ್ದರು. ಟಿ.ವಿ.ಯವರು ಮತ್ತೊಮ್ಮೆ ಡಾಕ್ಟರ್ ಅಗರ್ವಾಲ್ ಅವರನ್ನು ಹಾಗೂ ಮಗುವಿನ ತಂದೆ ತಾಯಿಯನ್ನು ಸ್ಟುಡಿಯೋಗೆ ಕರೆಸಿಕೊಂಡು ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಿ ತಮ್ಮ ಟಿ.ಆರ್.ಪಿ.ಯನ್ನು ಹೆಚ್ಚಿಸಿಕೊಂಡರು. ಸಹಜವಾಗಿ ಜನಿಸಿದ ಮಕ್ಕಳಿಗಿಂತ ಬಾಕ್ಸ್ ಬೇಬಿಗಳು ನಾಲ್ಕು ಪಟ್ಟು ಹೆಚ್ಚು ಚಟುವಟಿಕೆಯಿಂದ ಇರುತ್ತಾರೆಂದೂ ಅವರ ಐಕ್ಯೂ ಕೂಡ ಉಳಿದ ಮಕ್ಕಳಿಗಿಂತ ಮೇಲ್ಮಟ್ಟದಲ್ಲಿರುತ್ತದೆ ಎಂದು ಡಾಕ್ಟರ್ ಅಗರ್ವಾಲ್ ಅಭಿಪ್ರಾಯವನ್ನು ಹಂಚಿಕೊಂಡಿದ್ದರು.

ಹೆಣ್ಣು ತಾಯಿಯಾಗುವುದು ಮಗುವನ್ನು ಹೆತ್ತಾಗ. ಆದರೆ ಪರಿಪೂರ್ಣಳಾಗುವುದು ತನ್ನ ಎದೆಯ ಅಮೃತವನ್ನು ತನ್ನ ಕರುಳ ಕುಡಿಗೆ ಉಣ್ಣಿಸಿದಾಗ. ಎದೆ ಬತ್ತಿ ಹಾಲು ಬೀಳದಿದ್ದಾಗ ಹಸಿವಿನಿಂದ ರೋದಿಸುವ ಕಂದನನ್ನು ಕಂಡು ಆಕೆಯ ಕರುಳು ಕಿವುಚಿದಂತಾಗುತ್ತದೆ. ತಾಯಿಯಾದರೂ ತಾನು ಅಮ್ಮನಾಗದ ದುರಾದೃಷ್ಟಕ್ಕೆ ತನ್ನನ್ನು ತಾನು ಹಳಿದುಕೊಳ್ಳುತ್ತಾಳೆ. ಆದರೆ ಬಾಕ್ಸ್ ಬೇಬಿ ಅಮ್ಮಂದಿರು ತಮ್ಮ ಬಗ್ಗೆ ಹೆಮ್ಮೆ ಪಟ್ಟುಕೊಳ್ಳತೊಡಗಿದರು, ಇಷ್ಟು ವರ್ಷದಿಂದ ಕಾಪಾಡಿಕೊಂಡು ಬಂದ ತಮ್ಮ ಅಂಗ ಸೌಷ್ಠವ, ದೇಹಸಿರಿಯನ್ನು ಹಾಗೆಯೇ ಉಳಿಸಿಕೊಂಡಿರುವೆವಲ್ಲ ಎಂದು. ಬಳುಕುವ ಬಳ್ಳಿಯಂತೆ ಇದ್ದ ತಮ್ಮ ಸ್ನೇಹಿತೆಯರು ಮೊದಲ ಹೆರಿಗೆಯಾದೊಡನೆ ಗೋಧಿಯ ಮೂಟೆಯಂತಾಗಿ ಹೋಗಿದ್ದಾರೆ. ಎದೆಗಳೋ ಜೋಲು ಬಿದ್ದು ಹೊಟ್ಟೆಯನ್ನು ತಾಕುತ್ತಿವೆ. ಒಂದು ಬಾರಿ ದೇಹದ ಫಿಗರ್ ಹಾಳಾದರೆ ಮೊದಲಿನ ಸ್ಥಿತಿಗೆ ತರಬೇಕಾದಲ್ಲಿ ಜೀವನವಿಡೀ ಒದ್ದಾಡಬೇಕಾಗುತ್ತದೆ ಎಂದುಕೊಳ್ಳುತ್ತ ತಮ್ಮ ಜಾಣತನಕ್ಕೆ ತಮ್ಮ ಬೆನ್ನನ್ನು ತಟ್ಟಿಕೊಳ್ಳತೊಡಗಿದರು. ಸೌಂದರ್ಯ ಪ್ರಜ್ಞೆಯುಳ್ಳವರು, ನಟೀಮಣಿಯರೆಲ್ಲ ಬಾಕ್ಸ್ ಬೇಬಿ ಪದ್ಧತಿಯಿಂದ ನಿರಾಳವಾಗತೊಡಗಿದರು. ನಲವತ್ತರವರೆಗೂ ಮಕ್ಕಳ ಬಗ್ಗೆ ಚಿಂತಿಸಬೇಕಾದ ಪ್ರಮೇಯವೇ ಇಲ್ಲವೆಂದು ತಮಗೆ ಬೇಕಾದವರಿಗೆ ಸಲಹೆ ಕೊಡಲಾರಂಭಿಸಿದರು.

ಡಾಕ್ಟರ್ ಅಗರ್ವಾಲ್ ಅವರಿಗೆ ದೇಶದ ಅತ್ಯುನ್ನತ ಪ್ರಶಸ್ತಿಯನ್ನು ಕೊಟ್ಟು ಗೌರವಿಸಲಾಗಿ, ಅದಕ್ಕೆ ಆಭಾರಿಯಾಗಿ ಅವರು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತ, ಬಾಕ್ಸ್ ಬೇಬಿ ಪದ್ಧತಿಯ ಮೂಲಕ ಮಗುವನ್ನು ಪಡೆದುಕೊಂಡ ನೂರಾರು ದಂಪತಿಗಳಿಂದು ಸಂತಸದ, ನೆಮ್ಮದಿಯುತ ಜೀವನವನ್ನು ನಡೆಸುತ್ತಿದ್ದಾರೆ. ಈ ಪದ್ಧತಿಯಿಂದ ಹೆಚ್ಚು ಹೆಚ್ಚು ಮಹಿಳೆಯರು ಸ್ವಾವಲಂಬಿಗಳಾಗುವ ನಿಟ್ಟಿನಲ್ಲಿ ಸಾಗಿ ತಾವೂ ಕೂಡ ಪುರುಷರ ಸರಿಸಮನಾಗಿ ಕೆಲಸ ಮಾಡಲು ಆರಂಭಿಸಿದ್ದಾರೆ. ನಗರಗಳ ಗಡಿಯನ್ನು ದಾಟಿ ಹಳ್ಳಿ ಹಳ್ಳಿಗೂ ಈ ಪದ್ಧತಿ ತಲುಪಬೇಕಾದ ಅವಶ್ಯಕತೆ ಇದೆ. ಅಂದಾಗ ಮಾತ್ರ ಹೆರುವ ಯಂತ್ರಗಳಾಗಿರುವ ಗ್ರಾಮೀಣ ಹೆಣ್ಣು ಮಕ್ಕಳು ಕೂಡ ಶೋಷಣೆಯಿಂದ ಮುಕ್ತರಾಗಬಹುದು. ಈ ಕುರಿತಾಗಿ ಸರ್ಕಾರ ಹಾಗೂ ಆರೋಗ್ಯ ಸಚಿವರು ಆಂದೋಲನದ ಸ್ವರೂಪದಲ್ಲಿ ಬಾಕ್ಸ್ ಬೇಬಿ ಪದ್ಧತಿಯ ಪ್ರಚಾರ ಕಾರ್ಯ ನಡೆಸಲು ಮುಂದಾಗಬೇಕೆಂದು ಅಗರ್ವಾಲ್ ಅವರು ಭಿನ್ನವಿಸಿಕೊಂಡರು. ನಮ್ಮ ಸಂಶೋಧನೆ ನಿರಂತರ ಕ್ರಿಯಾಶೀಲತೆಯಿಂದ ಕೂಡಿದ್ದು, ಇನ್ನೂ ಹಲವಾರು ಕ್ರಾಂತಿಕಾರಕ ಹಾಗೂ ಜನರಿಗೆ ಅನುಕೂಲವಾಗುವಂತಹ ಸಂಶೋಧನೆಗಳಲ್ಲಿ ತೊಡಗಿದ್ದೇವೆ.

ಇತ್ತೀಚಿನ ದಿನಗಳಲ್ಲಿ ಹೆತ್ತವರನ್ನು, ಹಿರಿಯ ಜೀವಗಳನ್ನು ನೋಡಿಕೊಳ್ಳುವ ವೃದ್ಧಾಶ್ರಮಗಳು ನಾಯಿ ಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ಇದಕ್ಕೆ ಕಾರಣ, ವಯಸ್ಸಾದವರನ್ನು ನೋಡಿಕೊಳ್ಳಲಾಗದ ಸಮಯದ ಕೊರತೆ. ಮಕ್ಕಳು ವಿದೇಶದಲ್ಲಿರುವ ಕಾರಣದಿಂದಲೋ, ಮಗ ಸೊಸೆ ಇಬ್ಬರೂ ದುಡಿಯುವ ಅನಿವಾರ್ಯತೆ ಇರುವುದರಿಂದಲೋ ಹಿರಿಯರು ಕಡೆಗಣಿಸಲ್ಪಡುತ್ತಿದ್ದಾರೆ. ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ನಮ್ಮ ಹೊಸ ಸಂಶೋಧನೆ ನಮಗೆ ತುಂಬಾ ಹತ್ತಿರದಲ್ಲಿದೆ. ಓಡಾಡಲು ಅಸಮರ್ಥರಾದ, ಹಾಸಿಗೆಯನ್ನು ಹಿಡಿದ ಹಿರಿಯ ಜೀವಗಳನ್ನು ಮನೆಯಲ್ಲಿಯೇ ಇಟ್ಟುಕೊಂಡು ನೋಡಿಕೊಳ್ಳಬಹುದಾದ ಬಾಕ್ಸ್ ಕೇರಿಂಗ್ ಪದ್ಧತಿಯನ್ನು ಸಂಶೋಧಿಸಲಾಗಿದೆ. ಆರು ಅಡಿ ಉದ್ದ, ಮೂರು ಅಡಿ ಅಗಲದ ಈ ಪೆಟ್ಟಿಗೆ ಹೊಸದೊಂದು ಮನ್ವಂತರವನ್ನು ತರಲಿದೆ. ವಯಸ್ಸಾದವರನ್ನು ಇದರಲ್ಲಿ ಮಲಗಿಸಿ, ಬಾಕ್ಸ್ ಬೇಬಿಗೆ ಆಹಾರವನ್ನು ನೀಡುವ ಕ್ರಮದಲ್ಲಿಯೇ ಇವರಿಗೂ ದ್ರಾವಣದ ರೂಪದಲ್ಲಿ ಆಹಾರವನ್ನು ಇಂಜೆಕ್ಟ್ ಮಾಡಬಹುದಾಗಿದೆ. ಶುಚಿತ್ವದ ಸಂಪೂರ್ಣ ವ್ಯವಸ್ಥೆಯನ್ನು ಈ ಕೇರಿಂಗ್ ಬಾಕ್ಸ್ ಸ್ವತಃ ತಾನೇ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಹೀಗಾಗಿ ವೃದ್ಧರನ್ನು ಶುಚಿಗೊಳಿಸುವ ಯಾವುದೇ ಸಮಸ್ಯೆ ಇಲ್ಲ. ಹೆತ್ತವರನ್ನು ನಮ್ಮ ಕಣ್ಮುಂದೆಯೇ ಇಟ್ಟುಕೊಂಡಂತಾಗುವುದಲ್ಲದೇ ಅವರನ್ನು ವೃದ್ಧಾಶ್ರಮಕ್ಕೆ ತಳ್ಳಿ ಪಾಪ ಪ್ರಜ್ಞೆಯಲ್ಲಿ ತೊಳಲಾಡುವ ಅಗತ್ಯವೂ ಇಲ್ಲ. ಹೀಗೆ ಡಾಕ್ಟರ್ ಅಗರ್ವಾಲ್ ಅವರು ತಮ್ಮ ಹೊಸ ಸಂಶೋಧನೆಯ ಕುರಿತು ಹೆಮ್ಮೆಯಿಂದ ಹೇಳುತ್ತಿದ್ದಂತೆಯೇ ಕಿವಿಗಡಚಿಕ್ಕುವ ಚಪ್ಪಾಳೆಗಳ ಸದ್ದು ಕೇಳಿ ಬರತೊಡಗಿತು. ಅತ್ತ ಅಗರ್ವಾಲ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಿರ ದೂರವಾಣಿಗೆ ಬಿಡುವಿಲ್ಲದಂತೆ ಒಂದರ ಮೇಲೊಂದು ಕರೆಗಳು ಬರತೊಡಗಿದವು. ಹಲೋ! ಕೇರಿಂಗ್ ಬಾಕ್ಸ್ ಬುಕ್ ಮಾಡಬೇಕಿತ್ತು... .!